ಅಧ್ಯಕ್ಷರು— ಅವರ ಪಕ್ಕದಲ್ಲಿ ಬಂದು ಮಾತನಾಡಿ.

ಶ್ರೀ ಗೋಪಾಲ ಮುಕುಂದ ಕಾನಡೆ — ನಾನು ಇಲ್ಲೇ ಇದ್ದೇನೆ. ಪಕ್ಕದಲ್ಲಿ ಏತಕ್ಕೆ ಬರಲಿ ? ಹರಿಜನ ಮನೆ ಸುಟ್ಟಿದೆ. ವಂಸ್ಲಿವಂರ ಮನೆ ಸುಟ್ಟಿದೆ. ಅವರಿಗೆ ಯಾರಿಗಾದರೂ ಪರಿಹಾರ ಕೊಟ್ಟಿದ್ದಾರೆಯೇ? ಲಿಸ್ಟ್ ಅವರ ಹತ್ತಿರವೇ ಇದೆ. ಈ ರೀತಿ ತಾರತಮ್ಯವನ್ನು ಏತಕ್ಕೆ ಮಾಡುತ್ತಾರೆ?

ಅಧ್ಯಕ್ಷರು.— ನೀವು ಕೊಟ್ಟಿದ್ದೀರಿ. ಅವರು ನೋಡುತ್ತಾರೆ, ಕುಳಿತುಕೊಳ್ಳಿ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ಅದರಲ್ಲಿ ಯಾರ್ಯಾರು ಮಾತನಾಡಿದ್ದಾರೆ ಅವರಿಗೆ ಇದರಲ್ಲಿ ಅವಕಾಶ ಕೊಡುವುದಿಲ್ಲ. ಮುಂದೆ ಬೇಡಿಕೆಗಳ ಮೇಲೆ ಮಾತನಾಡುವಾಗ ಕೊಡುತ್ತೇನೆಂದು ಹೇಳಿದ್ದೇನೆ ಶ್ರೀಯುತರಾದ ಉಮರಬ್ಬ, ಲೈಸುದ್ದೀನ್, ಉದಾಸ್, ಕೋಳಿವಾಡ, ಶ್ರೀನಿವಾಸ್ ಚಿನ್ನಪ್ಪ, ರಾವಂಯ್ಯ ಮತ್ತು ಶ್ರೀಮತಿ ಮುಕ್ತರುನ್ನಿಸ ಬೇಗಂ ಇವರೆಲ್ಲಾ ಹಿಂದೆ ಮಾತನಾಡಿದ್ದಾರೆ. ಈಗ ಕಾನಡೆಯವರು ಇನ್ನೂ ಅನೇಕರು ಮಾತನಾಡಿದ್ದಾರೆ. ರಾಜ್ಯಪಾಲರ ಭಾಷಣದ ಮೇಲೆ ಯಾರೂ ಮಾತನಾಡಿಲ್ಲ. ಆಯವ್ಯಯದ ಮೇಲೆ ಯಾರು ಮಾತನಾಡಿಲ್ಲ ಅವರಿಗೆಲ್ಲ ವಂದೆ ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಕರೆದು ಅವಕಾಶ ಕೊಡುತ್ತೇನೆ

೫.೩೦ ಪಿ.ಎಂ.

ಯಾರ್ಯಾರು ಎಷ್ಟೆಷ್ಟು ಮಿನಿಟ್ ಮಾತನಾಡಿದ್ದಾರೆಂದು ನನ್ನ ಲಿಸ್ಟಿನಲ್ಲಿದೆ. ಮುತ್ತೆ ಅವಕಾಶ ಕೊಡುತ್ತೇನೆ. ಉಮರಬ್ಬನವರ ಭಾಷಣ ಕೇಳಬೇಕು. ಅವರಿಗೆ ಅವಕಾಶ ಮಾಡಿಕೊಡುತ್ತೇನೆ. ಆ ಕಡೆಯವರೂ, ಈ ಕಡೆಯವರೂ ಸಹಕರಿಸಬೇಕು. ರತ್ನಾಕರ್‌ರವರಿಗೂ ಅವಕಾಶ ಮಾಡಿಕೊಡುತ್ತೇನೆ. ಬಜೆಟ್ ಮೇಲೆ ಮಾತನಾಡಿದ್ದರಲ್ಲಿ ಕಾನಡೆಯವರೇ ಕೊನೆಯವರು.ನಾನು ಎದ್ದು ನಿಂತಾಗ ನೀವು ಎದ್ದು ನಿಲ್ಲಬಾರದು ನಿಮಗೆ ಅವಕಾಶ ಮಾಡಿಕೊಡುತ್ತೇವೆ, ಇಲ್ಲಿಗೆ ಈ ಚರ್ಚೆ ಮುಕ್ತಾಯವಾಯಿತು ಇನ್ನು ಮಂತ್ರಿಗಳ ಉತ್ತರ.....

## ಮನವಿ

## ಭಾರತ್ ಬಂದ್ ಬಗ್ಗೆ ಸದನಕ್ಕೆ ರಜಾ ಕೊಡುವ ಬಗ್ಗೆ

† ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೇ, ನಾಳೆ ದಿವಸ ಈ ಸದನ ನಡೆಯಬೇಕೇ? ಬೇಡವೇ? ಇದು ಮುಖ್ಯವಾದ ಪ್ರಶ್ನೆ ತಾವು ಸಭೆಯನ್ನು ಅಡ್ಜರ್ನ್ ಮಾಡುವಂಥ ಪರಿಸ್ಥಿತಿಯಲ್ಲಿದ್ದೀರಿ. ಅದಕ್ಕಾಗಿ ಹೇಳುತ್ತಿದ್ದೇನೆ, ನಾಳೆ ಭಾರತ ಬಂದ್ ಕಾರ್ಯಕ್ರಮವನ್ನು ೧೨ ವಿರೋಧ ಪಕ್ಷಗಳು ಮತ್ತು ರಾಷ್ಟ್ರೀಯ ಆಂಧ್ರೋಳನ ಸಮಿತಿ ಟ್ರೇಡ್ ಯೂನಿಯನ್ ಇವರೆಲ್ಲರೂ ಸೇರಿ ಆಚರಿಸುತ್ತಿದ್ದಾರೆ. ಪೆಟ್ರೋಲಿಯಂ, ಕೆರೋಸಿನ್ ಬೆಲೆ ಏರಿಕೆಯ ವಿರುದ್ಧವೂ ನಡೆಯುತ್ತಿದೆ. ಭಾರತ ಬಂದ್‌ಗೆ ಸಂಬಂಧಪಟ್ಟ ಹಾಗೆ ಎಲ್ಲಾ ಶಾಲೆಗಳು ಫ್ಯಾಕ್ಟರಿಗಳು ಇರುವುದಿಲ್ಲ. ಬಸ್ಸುಗಳು ನಾಳೆ ಓಡಾಡುವುದಿಲ್ಲ. ತಮಗೆ ಗೊತ್ತಿರುವ ಹಾಗೆ ಈ ರೀತಿ ಬಂದಾಗುವುದರಿಂದ ಇಂಥ ಒಂದು ಕೆಟ್ಟ ವಾತಾವರಣ ನಾಳೆ ಉಂಟಾಗುತ್ತದೆ, ಈ ವಾತಾವರಣ ನಮ್ಮ ದೇಶದಲ್ಲಿ ನಮ್ಮ ರಾಜ್ಯದಲ್ಲಿ ನಾಳೆ ಉಂಟಾಗುತ್ತದೆ. ಎಲ್ಲಾ ಸರ್ಕಾರಿ ನೌಕರರು ನಾಳೆ ದಿವಸ ಅವರು ಸ್ಟ್ರೈಕ್ ಮಾಡುತ್ತಿದ್ದಾರೆ. ಮುಷ್ಕರ ಹೂಡುತ್ತಿದ್ದಾರೆ. ೩೧೧ ರ ಆರ್ಟಿಕಲ್ ವಿರುದ್ಧವಾಗಿ ಸಂಪ್ರೀಂಕೋರ್ಟ್‌ನ ತೀರ್ಮಾನ ಸರಿಯಲ್ಲವೆಂದು ಅವರೂ ಕೂಡ ಮುಷ್ಕರ ಹೂಡುತ್ತಿದ್ದಾರೆ. ಇಂಥ ಪ್ರಕ್ಷುಬ್ಧತೆ ದೇಶದಲ್ಲಿ ಏರ್ಪಟ್ಟಿದೆ ರಾಜ್ಯದಲ್ಲಿಯೂ ಸಹ ಕೆಟ್ಟ ಪರಿಸ್ಥಿತಿ ಏರ್ಪಟ್ಟಿದೆ ಈ ವಾತಾವರಣದಲ್ಲಿ ನಾವು ಬರಲಿಕ್ಕೂ ಆಗುವುದಿಲ್ಲ, ಹೋಗುವುದಕ್ಕೂ ಆಗುವುದಿಲ್ಲ. ಪರಿಸ್ಥಿತಿ ಯಾವ ರೀತಿ ಇದೆ ಎನ್ನುವುದು ತಮಗೇ ಗೊತ್ತಿದೆ. ಆದ್ದರಿಂದ ಈ ಸದನವನ್ನು ನಾಳೆ ದಿವಸ ನಡೆಸಂವುದಕ್ಕಾಗುವುದಿಲ್ಲ. ಬಂದ್ ಶಾಂತ ರೀತಿಯಿಂದ ನಡೆಯಬೇಕು ಎನ್ನುವುದು ನಮ್ಮ ಅಭಿಪ್ರಾಯ ಸಿ.ಪಿ.ಐ. ಸಿ.ಪಿ.ಎಂ ಬಿ.ಜೆ.ಪಿ. ಎಲ್ಲಾ ಪಕ್ಷಗಳು ಹೋಗಿ ಶಾಂತಿಯುತವಾಗಿ ಬಂದ್‌ನಲ್ಲಿ ಭಾಗಿಯಾಗಬೇಕೆಂದಿದ್ದೇವೆ. ಬೇರೆ ಗಲಾಟೆ ಗಲಭೆಗಳು ಪ್ರಕ್ಷುಬ್ಧ ವಾತಾವರಣ ನಡೆಯದಂತೆ ನೋಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಾಳೆ ದಿವಸ ಸಭೆಯನ್ನು ನಿಲ್ಲಿಸಬೇಕೆಂದು ನನ್ನ ಮನವಿ,

ಶ್ರೀ ಆರ್. ವೆಂಕಟರಾಮಯ್ಯ.— ಅಧ್ಯಕ್ಷರೇ, ನಾಳೆ ದಿವಸ ಇಡೀ ಭಾರತ ಬಂದ್ ಆಗುತ್ತದೆ. ಇಲ್ಲಿ ಅಧಿಕಾರಿಗಳು ಬೇರೆ ಇರುವುದಿಲ್ಲ. ಸರ್ಕಾರಿ ಅಧಿಕಾರಿಗಳು ಸ್ಟ್ರೈಕ್ ಮಾಡುತ್ತಾರೆ. ಸ್ಪಾಟ್ ಸ್ಟ್ರೈಕ್ ಮಾಡುತ್ತಾರೆ. ಇಂಥ ವಾತಾವರಣ ಇರುವುದರಿಂದ ನಾವು ನಮ್ಮ ಕ್ಷೇತ್ರಕ್ಕೆ ಹೋಗಬೇಕು,

ಅಲ್ಲಿ ಲಾ ಅಂಡ್ ಆರ್ಡರನ್ನು ಮೈನ್‌ಟೈನ್ ಮಾಡಬೇಕಾಗಿರುತ್ತದೆ. ಬಂದ್‌ನಲ್ಲಿ ಯಾವುದೇ ಒಂದು ಅಹಿತಕರ ಘಟನೆಗಳು ನಡೆಯದಂತೆ ಮಾಡಬೇಕಾಗುತ್ತದೆ. ದಯವಿಟ್ಟು ಎಲ್ಲರೂ ಸಹಕರಿಸಬೇಕು. ಅಲ್ಲಿಯೂ ನಮ್ಮ ಸ್ನೇಹಿತರು ಸಹಕರಿಸಬೇಕು. ನಾಳೆ ದಿವಸ ಈ ಸಭೆಯನ್ನು ನಡೆಸಬಾರದೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಅಧ್ಯಕ್ಷರೇ, ಭಾರತ ಬಂದ್‌ನ್ನು ಕೇಂದ್ರ ಸರ್ಕಾರ ದಿನ ನಿತ್ಯ ಉಪಯೋಗ ವಸ್ತುಗಳ ಮೇಲೆ ಬೆಲೆ ಏರಿಕೆಯನ್ನು ಏರಿಸಿರುವುದರಿಂದ ಎಲ್ಲಾ ಪಕ್ಷಗಳು ಸೇರಿ ಈ ಬಂದನ್ನು ಕರೆದಿದ್ದಾರೆ. ಶಾಸಕರು ಅಲ್ಲಿದ್ದರೆ ಶಾಂತ ರೀತಿಯಲ್ಲಿ ಬಂದಾಗುತ್ತದೆ. ಆದ್ದರಿಂದ ಈ ಬಂದನ್ನು ಆಚರಿಸಿ ಯಾವುದೇ ಅಶಾಂತಿ ವಾತಾವರಣ ಉಂಟಾಗದಂತೆ ಮಾಡುವುದೇ ಶಾಸಕರ ಕರ್ತವ್ಯ ಎಂದು ಭಾವಿಸಿದ್ದೇನೆ. ಸದನದಲ್ಲಿ ಇದನ್ನು ಚರ್ಚೆ ಮಾಡಬೇಕೆಂದು ಇದನ್ನು ನಿಲುವಳಿ ಸೂಚನೆಯಲ್ಲಿ ಕೊಟ್ಟಿದ್ದೆ. ಆದರೆ ಆ ಸಂದರ್ಭ ಬರಲಿಲ್ಲ. ಈ ಸಂದರ್ಭದಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ ವಿಶೇಷವಾಗಿ ಕಾಂಗ್ರೆ ಸದಸ್ಯರು ಬೆಲೆ ಏರಿಕೆ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಎಲ್ಲರೂ ಒಟ್ಟಿಗೆ ಸೇರಿ ಭಾರತ ಬಂದ್ ಆಚರಿಸೋಣ. ಬಂದನ್ನು ಯಶಸ್ವಿಯಾಗಿ ನಡಾಬೇಕು. ರಾಜ್ಯದ ಎಲ್ಲಾ ಜನತೆಯು ಅಪಾರವಾಗಿ ಬಂದ್‌ನಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಜಿ. ಬೆಲ್ಲದ್ — ಅಧ್ಯಕ್ಷರೇ, ತಮಗೆ ಗೊತ್ತಿದೆ. ಈ ಬೆಲೆ ಏರಿಕೆಯ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಹೇರ ಪ್ರಕಾರ ನಿಲುವಳಿ ಸೂಚನೆಯನ್ನು ತಂದಿದ್ದೆ. ಈ ಬೆಲೆ ಏರಿಕೆ ಇಡೀ ದೇಶದ ಜನತೆಯ ಮೇಲೆ ದೊಡ್ಡ ಪರಿಣಾಮವಾಗುತ್ತದೆ, ಬಡತನ ರೇಖೆಯ ಕೆಳಗಿರುವಂತಹವರಿಗೆ ಬಹಳ ಪರಿಣಾಮವಾಗುತ್ತದೆ. ಭಾರತ್ ಬಂದ್ ಎನ್ನುವಂಥ ಘೋಷಣೆ ಮಾಡಿರುವುದರಿಂದ ಎಲ್ಲಾ ಸಂಘಗಳು ಇದರಲ್ಲಿ ಇವತ್ತು ಭಾಗವಹಿಸಿ ಕಾರ್ಯ ಮಾಡುತ್ತಿದ್ದಾರೆ ಇವತ್ತಿನ ದಿವಸ ನಾವುಗಳೂ ಕೂಡ ನಮ್ಮ ನಮ್ಮ ಕ್ಷೇತ್ರಕ್ಕೆ ಹೋಗಿ ಜನತೆಯ ಆಥವಾ ಅಲ್ಲಿ ವಾತಾವರಣವನ್ನು ಶಾಂತತೆಯಿಂದ ಕೂಡಿರುವ ರೀತಿಯಲ್ಲಿ ಜನತೆಯ ಸಂರಕ್ಷಣೆ ಕಾರ್ಯಕ್ಕಾಗಿ ನಾವು ಹೋಗಬೇಕಾಗಿದೆ. ಆದ್ದರಿಂದ ತಾವು ನಾಳೆ ದಿವಸ ಈ ಸಭೆಯನ್ನು ನಿಲ್ಲಿಸಬೇಕೆಂದು ಹೇಳಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಸನ್ಮಾನ್ಯ ಅಧ್ಯಕ್ಷರೇ, ಈಗ ಈ ಮನೆಯ ಸದಸ್ಯರಾದ ಕೃಷ್ಣನ್ ರವರು ವೆಂಕಟರಾಮಯ್ಯನವರು, ಯಡಿಯೂರಪ್ಪನವರು ಮತ್ತು ಅನೇಕ ಮಾನ್ಯರು ನಾಳೆ ಏನು ಭಾರತ ಬಂದಾಗುತ್ತದೆ ಮತ್ತು ಮುಷ್ಕರ ಇದೆ. ಆದ್ದರಿಂದ ಈ ಸದನದ ಕಾರ್ಯಕಲಾಪಗಳನ್ನು ನಾಳೆ ಮಟ್ಟಿಗೆ ಮುಂದುವರಿಸಬೇಕು ಎಂದು ಒತ್ತಾಯ ಮಾಡಿದ್ದಾರೆ. ಈಗ ತಮಗೆ ಗೊತ್ತಿದೆ. ಈ ಭಾರತ ಬಂದ್ ನಡೆಯುತ್ತಿದೆ , ನನಗೆ ತಿಳಿದ ಪ್ರಕಾರ ಇದು ಕರ್ನಾಟಕ ಸರ್ಕಾರದವರು ಕೊಟ್ಟಂಥ ಕಾಲ್ ಅಂತೂ ಇಲ್ಲ. ಕೆಲವು ಪಕ್ಷಗಳು ಕೊಟ್ಟಿವೆ. ಆದರೆ ಈ ದೇಶದಲ್ಲಿ ಅನೇಕ ಪಕ್ಷಗಳು ಇವೆ. ಅತ್ಯಂತ ದೊಡ್ಡ ಪಕ್ಷ ಲಕ್ಷಾಂತರ ಮಂದಿ ಸದಸ್ಯರುಳ್ಳ ಕಾಂಗ್ರೆಸ್ ಪಕ್ಷವಂತೂ ಬಂದ್‌ಗೆ ಕಾಲ್ ಕೊಟ್ಟಿಲ್ಲ. ಸಹಕಾರ ಕೂಡ ಮಾಡುತ್ತಿಲ್ಲ. ಆದ್ದರಿಂದ ಈ ಬಂದ್ ಮತ್ತು ಸಹಕಾರ ಈ ವಿಷಯ ರಾಜಕೀಯವಾಗಿ ಜನ ಮಾತನಾಡಬೇಕು. ಇದರ ಬಗ್ಗೆ ಹೊರಗಡೆ ನಾವೂ ನೀವೂ ಮಾತನಾಡುತ್ತೇವೆ. ಆದರೆ ಈ ಸದನಕ್ಕೆ ಸೀಮಿತವಾಗಿ ತಮಗೆ ಹೇಳಬೇಕಾದರೆ ನಾಳೆ ನಾವು ಸದನದ ಕಾರ್ಯಕಲಾಪಗಳನ್ನು ನಿಲ್ಲಿಸ ತಕ್ಕಂಥದ್ದು ಅಕ್ರಮವಾಗುತ್ತದೆ. ಬಹಳ ಕೆಟ್ಟ ಪರಂಪರೆಯನ್ನು ನಾವು ಅನುಸರಿಸಿದಂತೆ ಆಗುತ್ತದೆ. ಏಕೆಂದರೆ ನಾವು ಈ ಕರ್ನಾಟಕದ ಪರಂಪರೆಯನ್ನು ನೋಡಿ. ಹೇಶದ ಬೇರೆ ಯಾವುದೇ ಪರಂಪರೆಯನ್ನು ನೋಡಿ, ಒಂದು ಬಂದನ್ನು ಆಚರಿಸುತ್ತಿದ್ದರೆ ಆಥವಾ ಮುಷ್ಕರ ಮಾಡುತ್ತಿದ್ದರೆ ಎಲ್ಲಿಯೂ ಕೂಡ ಸದನವನ್ನು ನಿಲ್ಲಿಸತಕ್ಕಂಥದ್ದು ನನ್ನ ಅನುಭವಕ್ಕೆ ಬಂದಿಲ್ಲ, ಇತಿಹಾಸದಲ್ಲಿ ನೋಡಿಲ್ಲ. ನನ್ನ ಅನುಭವದಲ್ಲಿಯಂತೂ ನೋಡಿಯೇ ಇಲ್ಲ. ಸಮಕಾಲೀನದ ಅನುಭವದಲ್ಲಿಯೂ ಕೂಡ ಆಗಿಲ್ಲ. ಅಲ್ಲಿಯ ಹಿರಿಯ ಸದಸ್ಯರಿದ್ದೀರಿ. ಸನ್ಮಾನ್ಯ ವಿರೋಧ ಪಕ್ಷಗಳಲ್ಲಿ ಕೆಲಸ ಮಾಡುವಂಥ ಮಾನ್ಯರು ಇದ್ದಾರೆ. ಮುಷ್ಕರ ಮಾಡುವುದಕ್ಕೆ ಅನೇಕ ಸಂಘ ಸಂಸ್ಥೆಗಳು ಇವೆ. ಕೆಲವರು ಮುಷ್ಕರಕ್ಕೆ ಕಾಲ್ ಕೊಡುತ್ತಾರೆ, ಆದರಲ್ಲಿ ಎಂಪ್ಲಾಯೀಸ್ ಯೂನಿಯನ್‌ಗಳು ಇವೆ. ಅದರಲ್ಲಿ ಅನೇಕ ವಿಭಾಗಗಳು ಇವೆ. ಅವರಲ್ಲಿ ಕೆಲವರು ಮುಷ್ಕರಕ್ಕೆ ಕಾಲ್ ಕೊಡುವುದಿಲ್ಲ. ಕೆಲವು ಲಾಯರ್ಸ್ ಪೀಪಲ್ ಅವರು ಕೆಲಸಕ್ಕೆ ಹಾಜರಾಗಬೇಕಾಗುತ್ತದೆ. ಕರ್ತವ್ಯ ಇದೆ ಎಂದು ಕೆಲಸಕ್ಕೆ ಹಾಜರಾಗಬೇಕಾದರೆ ತಾವು ಕಛೇರಿಯನ್ನು ಬಂದ್ ಮಾಡಿದರೆ ವಿಧಾನಸಭೆಯಲ್ಲಿ ಸಂವಿಧಾನಾತ್ಮಕವಾದ ಕೆಲಸ ಮಾಡಬೇಕಾದಂಥ